THE MYSORE LEGISLATIVE ASSEMBLY.

NINTH DAY.

Friday, 20th March 1953.

The House met in the Assembly Hall, Old Public Offices, Bangalore, at Twelve of the Clock.

MR. SPEAKER (Sri H. Siddaiya, B.A., LL.B.), in the Chair.

QUESTIONS AND ANSWERS.

New Ration Depots.

Q.—223. **Sri M. PALANIYAPPAN** (Ulsoor).—

Will the Government be pleased to state:—

(*a*) the number of ration depots newly sanctioned from 30th January 1952 to 30th January 1953 in the Bangalore Corporation area ;

(*b*) the circumstances under which each is sanctioned ;

(*c*) how many applications are there still in the waiting list within that period ?

A.—**Sri H. SIDDAVEERAPPA** (Minister for Home and Industries).—

(*a*) 5.

(*b*) Sanctioned according to the needs of the localities concerned.

(*c*) 78 applications.

Sri M. PALANIYAPPAN.—Out of these 78 applications still in the waiting list, how many are from ex-service men ?

Sri H. SIDDAVEERAPPA.—I want notice for that question.

Sri M. PALANIYAPPAN.—Out of these five sanctioned already, how many belong to ex-servicemen ?

Sri H. SIDDAVEERAPPA.—I do not know. Government have a policy for giving licences, preference being given to ex-servicemen.

Sri M. PALANIYAPPAN.—May I know how many licences of ration depots were cancelled for having sold huge quantities of wheat and etc.?

Sri H. SIDDAVEERAPPA.—I do not think it arises out of this question.

L.A.

ಶ್ರೀ ಆರ್. ಅನಂತರಾಮನ್.—ಎಕ್ಸ್ ಸರ್ವೀಸ್ ಮೆನ್ನಿಗೆ ರೇಷ್ಟ್ ಡಿಪೋಗಳನ್ನು ಕೊಡುವ ಸಂಬಂಧದಲ್ಲಿ ಸರ್ಕಾರದವರು ಅವರಿಗೆ ಬಂಡವಾಳ ಕೊಟ್ಟು ಸಹಾಯ ಮಾಡುತ್ತಾರೆಯೇ ?

Sri H. SIDDAVEERAPPA.—We have got a scheme where ex-servicemen are financially helped. ರೂಲ್ಸ್ ಅನುಸರಿಸಿ, ಅವಕಾಶವಿದ್ದರೆ ಕೊಡುತ್ತಾರೆ.

Fishery right in minor and major tanks.

Q.—252. **Sri G. A. THIMMAPPA GOWDA** (Arkalgud).—

Will the Government be pleased to state—

(*a*) whether it has come to their notice that the system of auctioning fishery right in minor and major tanks is causing great hardship and unnecessary litigation among the villagers in the State ;

(*b*) whether it has come to their notice that the maintenance work of the tanks has been completely neglected by the villagers after this system is introduced ;

(*c*) the amount realised by them by auctioning fishery rights for the last three years and the expenditure on the working of this scheme for the last three years ?

A.—**Sri H. SIDDAVEERAPPA** (Minister for Home and Industries).—

(*a*) Not Generally. One case was reported in the year 1951-52 and none during the current year.

(*b*) No.

(SRI H. SIDDAVEERAPPA.)

Revenue.

		Rs.
(*c*) 1950–51	...	34,429.
1951–52	...	31,980 nearly.
1952–53	...	32,322.

Expenditure.

	Rs.
1950–51	... 41,948 nearly
1951–52	... 40,570
1952–53	... 36,833.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಂಸ್ಥಾನದಲ್ಲಿರತಕ್ಕ ಮೇಜರ್ ಮತ್ತು ಮೈನರ್ ಕೆರೆಗಳ ನಂಖ್ಯೆ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಸುಮಾರು 23 ಸಾವಿರ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೋದವರ್ಷ ಎಷ್ಟು ಕೆರೆಗಳಲ್ಲಿ ಮೀನುಗಳನ್ನು ಹರಾಜುಮಾಡಿದ್ದಾರೆ ಫಿಷರಿ ಇಲಾಖೆಯವರು ?

ಶ್ರೀ ಎಚ್. ಸಿದ್ದವೀರಪ್ಪ.—ಹೋದ ವರ್ಷದಲ್ಲಿ ಮಾತ್ರವೇ ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ವೇಸಾಮಾನ್ಯವಾಗಿ ವರ್ಷ ವರ್ಷವೂ ಎಷ್ಟು ಕೆರೆಗಳಲ್ಲಿ ಹರಾಜು ಮಾಡುತ್ತಾರೆ ?

Sri H. SIDDAVEERAPPA.—I have no information.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಅಥವಾ ಇಲಾಖೆಯವರು ಕೇವಲ 200 ಕೆರೆಗಳಲ್ಲಿ ಮಾತ್ರ ಮೀನು ಹಿಡಿಯುವ ಹಕ್ಕನ್ನು ಹರಾಜುಮಾಡುತ್ತಿದ್ದಾರೆಂಬುದು ಗೊತ್ತಿದೆಯೇ ?

Sri H. SIDDAVEERAPPA.—I will verify it.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಫಿಷರಿ ಕಾನೂನು ಸಂಸ್ಥಾನಾಮಳೆ ಇರುವ ಎಲ್ಲಾ ಕೆರೆಗಳಿಗೂ ಅನ್ವಯಿಸುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಿದ್ದ ಮೇಲೆ ಎಲ್ಲಾ ಕೆರೆಗಳಿಗೂ ಅನ್ವಯಿಸಿ ಹರಾಜು ಮಾಡದೇಯಿರುವುದರಿಂದ, ಅಲ್ಲಿ ರೈತರು ಮೀನು ಹಿಡಿದುಕೊಂಡು ಕೆರೆ ರಿಪೇರಿ ಮಾಡಿಕೊಳ್ಳುವುದಕ್ಕೆ ತೊಂದರೆಯಾಗಿರುವುದುಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಬಂದಿದೆ. ಆದುದರಿಂದಲೇ ಸಂಸ್ಥಾನಾಮಳೆ ಜಾರಿಗೆ ತರುವುದಕ್ಕೆ ಬದಲು ಕೆಲವು ಕೆರೆಗಳಲ್ಲಿ ಮಾತ್ರ ತಂದು ಕೆಲವನ್ನು ಹಾಗೆಯೇ ಬಿಡಬೇಕೆಂದು ಯೋಚಿಸಿ, ಇದಕ್ಕಾಗಿ ಒಂದು ಯೋಜನೆ ತಯಾರುಮಾಡಬೇಕೆಂದಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಿಂದೆ ಆಯಾ ಗ್ರಾಮಗಳವರು ತಮ್ಮ ಕೆರೆಯಲ್ಲಿ ಮೀನು ಹಿಡಿದುಕೊಂಡು ಕಾವುಗಾರಿಮಾಡಿಕೊಂಡು ಮಣ್ಣು ತೆಗೆಯುವ ಕೆಲಸ ಮಾಡಿಕೊಳ್ಳುತ್ತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆಯೂ ರೆವೆನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಹರಾಜುಮಾಡುತ್ತಿದ್ದರು. ಹೀಗೆ ಮಾಡಬೇಕೆಂದು ಕಾನೂನಿದೆ. ಆದರೆ ಅಲ್ಲಲ್ಲಿ ಅಲ್ಲಿಯ ಜನರೇ ತಿನ್ನುತ್ತಿದ್ದರು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಮೈನರ್ ಕೆರೆಗಳಿಗೆ, ಗ್ರಾಮಸ್ಥರೇ ಅಲ್ಲಿ ಮೀನು ಹಿಡಿದುಕೊಂಡು ಕೆರೆ ಕೆಲಸಗಳನ್ನು ಮಾಡಿಕೊಳ್ಳಬಹುದು ಅಥವಾ ಆಯಾ ಗ್ರಾಮ ಪಂಚಾಯತಿಗೆ ಮೀನು ಹರಾಜು ಮಾಡಿದ ಹಣವನ್ನು ಜಮಾ ಮಾಡತಕ್ಕುದು ಎಂಬ ಬಗ್ಗೆ ಕಾರ್ಯಕ್ರಮತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಡುತ್ತೇವೆ. ಆದರೆ ನಾನು ಆಗಲೆ ಹೇಳಿದ ಹಾಗೆ, ಎಲ್ಲಾ ಕೆರೆಗಳಿಗೂ ಅನ್ವಯಿಸುವುದ ಕ್ಯಾಗುವುದಿಲ್ಲ. ಎಲ್ಲೆ ಅನುಕೂಲವಾಗಿ, ಮೀನು ಚೆನ್ನಾಗಿದೆಯೋ ಅಂಥ ಕೆರೆಗಳನ್ನು ನಾವು ನಮ್ಮ ಸುಪರ್ದಿನಲ್ಲಿಟ್ಟುಕೊಂಡು ಬಾಕಿ ಕೆರೆಗಳನ್ನು ಹಾಗೆಯೇ ಬಿಡಬೇಕೆಂದು ಯೋಚನೆಮಾಡುತ್ತಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಈ ಮೀನು ಹಿಡಿಯುವ ವಿಷಯದಲ್ಲಿ ಎಲ್ಲಾ ಕೆರೆಗಳಲ್ಲಿಯೂ ಮೀನು ಹಿಡಿಯುವುದಕ್ಕೆ ಅವಕಾಶಕೊಟ್ಟಿದ್ದೀರೋ ಅಥವಾ ಕೆಲವು ಕೆರೆಗಳಲ್ಲಿ ಹಿಡಿಯಬಾರದೆಂದು ಪ್ರತಿಬಂಧಕ ಹಾಕಿದ್ದೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಿರತಕ್ಕ ಕಾನೂನಿನ ಪ್ರಕಾರ, ಎಲ್ಲಾ ಕೆರೆಗಳಿಗೂ ಈ ಕಾನೂನು ಅನ್ವಯಿಸುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಪ್ರತಿಬಂಧಕವೇನಾದರೂ ಇದೆಯೆ ಮೀನು ಹಿಡಿಯುವುದಕ್ಕೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಎಲ್ಲಾ ಕೆರೆಗಳಲ್ಲಿಯೂ ಕಾನೂನು ಪ್ರಕಾರ ಮೀನು ಹಿಡಿಯಬಾರದೆಂದಿದೆ; ಹರಾಜು ಹಾಕಬೇಕು, ಫಿಶರೀಸ್ ಯೋಜನೆ ಗೊಳಪಡಬೇಕೆಂದಿದೆ.

ಶ್ರೀ ಪಿ. ಆರ್. ರಾಮಯ್ಯ.—ಈ ಕಾನೂನನ್ನು ಸರಿಯಾಗಿ ಪಾಲನೆ ಮಾಡುತ್ತಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೆ ಒಂದು ಸರ್ಕಾರಿ ಆಜ್ಞೆಯಿದೆ. ಇದರ ಆಡಳಿತ ಮೀನಿನ ಅಧಿಕಾರಿಗಳಿಗೆ ಸೇರಿದ್ದು, ಅವರು ನೋಡಿಕೊಳ್ಳುತ್ತಾರೆ.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಕೆರೆಗಳಲ್ಲಿ ಮೀನುಗಳು ಬಹಳ ಉತ್ತಮವಾಗಿವೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಚಿತ್ರದುರ್ಗದ ಮೀನುಗಳ ರುಚಿಯ ವಿಚಾರವನ್ನು ಇನ್ನೂ ಪರಿಶೀಲನೆ ಮಾಡಿಲ್ಲ. (ನಗು !)

ಶ್ರೀ ಜಿ. ಶಿವಪ್ಪ.—ಮಾರಿಕಣಿವೆ, ಭೀಮ ಸಮುದ್ರದ ಕೆರೆ ಇಂಥ ಕಡೆ ಮೀನು ಸಾಕಲು ಬಹಳ ಅನುಕೂಲವಾಗಿದೆಯೆಂಬುದು ಗೊತ್ತಿದೆಯೇ ?

Sri H. SIDDAVEERAPPA.—I have already answered my friend Sri Thimmappa Gowda that it is under the active examination of the Government. ಸಾಮಾನ್ಯವಾಗಿ ದೊಡ್ಡ ದೊಡ್ಡ ಕೆರೆಗಳಿಗೆ ಏರ್ಪಾಡು ಮಾಡುತ್ತೇವೆ. ಮಾನ್ಯ ಸದಸ್ಯರ ಸಲಹೆಯನ್ನು ಯೋಚನೆಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಯಾವ ಯಾವ ಕೆರೆಗಳಲ್ಲಿ ಎಲ್ಲೆಲ್ಲಿ ರೈತರು ಹರಾಜುಮಾಡಬಹುದೆಂದು ದೂರು ಕೊಡುತ್ತಾರೋ ಅಂಥಾ ಕಡೆಗಳಲ್ಲಿ ತಾನೆ ಹರಾಜು ಮಾಡಿಸುವುದು?

Mr. SPEAKER.—Please repeat your question.

ಶ್ರೀ ಎಸ್. ಸಿದ್ದಪ್ಪ.—ಯಾವ ಯಾವ ಕೆರೆಗಳಲ್ಲಿ ಅಲ್ಲಿಯ ರೈತರು ಸಾಲಾಬಾದು ಕಾಮಗಾರಿ ಮಾಡುವುದಿಲ್ಲವೋ ಆ ಕೆರೆಗಳಲ್ಲಿ ತಾನೆ ಮೀನು ಹರಾಜುಮಾಡುವ ಪದ್ಧತಿಯಿರುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ್ದೇನೆ. ಕಾನೂನನ್ನನುಸರಿಸಿ ಮಾಡುತ್ತಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ನಾನು ತಿಳಿಯಬೇಕೆಂದಿರುವುದು, ಕೆರೆಯ ಅಚ್ಚುಕಟ್ಟುದಾರರೇ ಆಯಾ ಕೆರೆಯ ಸಾಲಾಬಾದು ಕೆಲಸಮಾಡಿದರೆ ಅವರೇ ಮೀನನ್ನು ಉಪಯೋಗಿಸಿಕೊಳ್ಳುವ ಪದ್ಧತಿ ಜಾರಿಯಲ್ಲಿದೆಯೋ ಇಲ್ಲವೋ ಎಂಬುದನ್ನು ?

ಶ್ರೀ ಎಚ್. ಸಿದ್ದವೀರಪ್ಪ.—ಮೊದಲು ಆ ರೀತಿ ಇತ್ತು. ಈಚೆಗೆ ಅದನ್ನು ಬದಲಾಯಿಸಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಆ ಪದ್ಧತಿಯನ್ನು ಜಾರಿಗೆ ತರುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಹಳ ಮಟ್ಟಿಗೆ ತಮ್ಮ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮೀನು ಹಿಡಿಯುವ ಹಕ್ಕನ್ನು ಕೆರೆಗಳಲ್ಲಿ ಹರಾಜು ಮಾಡಿದ್ದರಿಂದ ನೀರು ಪೋಲಾಗಿ ರೈತರಿಗೆ ತೊಂದರೆಯಾಗಿದೆಯೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ರೈತರು ಆ ರೀತಿಯಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದಕ್ಕೆ ಸರ್ಕಾರದ ವರು ಸೂಕ್ತ ಕಾರ್ಯಕ್ರಮ ಕೈಕೊಂಡು ಆ ರೀತಿ ನೀರು ಪೋಲಾಗದಂತೆ ಮಾಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಮೀನು ಹರಾಜು ಮಾಡುವುದರಿಂದ ನೀರು ಪೋಲಾಗುವುದಿಲ್ಲವೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಎ ವಿ. ನರಸಿಂಹರೆಡ್ಡಿ.—ಆದರೆ ಒಂದು ಕಡೆ ನೀರಿರುವಾಗಲೇ ಮೀನು ಹಿಡಿಯುವುದಕ್ಕೆ ಕೊಟ್ಟುದರಿಂದ ತೊಂದರೆಯಾಗಿರುವುದು ಗೊತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ಹರಾಜಿಗೆ ಕೊಡುವಾಗಲೇ ಇಷ್ಟು ನೀರಿರುವಾಗ ಕೊಡಬೇಕೆಂದು ಷರತ್ತು ಹಾಕಿರುತ್ತದೆ. ಮಾನ್ಯ ಸದಸ್ಯರು ಹೇಳಿರುವಂತೆ ತೊಂದರೆಯಾಗಿದ್ದರೆ, ಲೈಸೆನ್ಸ್ ಕೊಡುವಾಗಲೇ ಷರತ್ತು ಹಾಕಲು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೂರು ವರ್ಷದ ಕೆಳಗೆ ಏನು ಉತ್ಪತ್ತಿ ಸರ್ಕಾರಕ್ಕೆ ಬರುತ್ತಿತ್ತೋ ಅಷ್ಟೇ ಉತ್ಪತ್ತಿ ಈಗ ಬರುತ್ತಿದ್ದರೂ ಖರ್ಚು ಏನಾ ಕಾರಣ ಜಾಸ್ತಿಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಖರ್ಚು ಏನಾ ಕಾರಣ ಎಂದು ಹೇಳುವುದು ಕಷ್ಟ ; ಯೋಚನೆ ಮಾಡಬೇಕಾಗಿದೆ. ಎಷ್ಟಿರಬೇಕೆಂಬುದನ್ನು ಆಗಲೇ ಫೈನಾನ್ಸ್ ಮಂತ್ರಿಗಳು ಭಾಷಣದಲ್ಲೇ ಹೇಳಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಲೈಸೆನ್ಸ್ ಫೀ ಎಂದಿರುವುದು ಉತ್ಪತ್ತಿಯಲ್ಲಿ ಸೇರಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಆರ್ ನಾಗಪ್ಪಶೆಟ್ಟಿ.—ಅದೆಷ್ಟಾಗುತ್ತದೆ ?

Sri H. SIDDAVEERAPPA.—I have given the figure.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಪ್ರತ್ಯೇಕವಾಗಿ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಳವಳ್ಳಿ ತಾಲ್ಲೂಕು ನಿಟ್ಟೂರು ಕೆರೆಯಲ್ಲಿ ಅವಕಾಶ ಕೊಟ್ಟಿಲ್ಲವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಿಟ್ಟೂರು ಕೆರೆಯಲ್ಲಿ ಮೀನು ಹಿಡಿಯಲು ಆ ಗ್ರಾಮದವರಿಗೆ ಮಾತ್ರ ಅವಕಾಶಕೊಡಬೇಕೆಂದು ರೂಲ್ಸಿನಲ್ಲಿ ಹೇಳಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹರಾಜಿನಲ್ಲಿ ಯಾರು ಪಡೆಯುತ್ತಾರೋ ಅವರಿಗೆ ಕೊಡಲಾಗುತ್ತಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೆರೆ ಕಾಮಗಾರಿಮಾಡುವ ಗ್ರಾಮಸ್ಥರಿಗೆ ಕೇಳಿದರೆ ರಿಯಾಯಿತಿ ತೋರಿಸಿ ಅವರಿಗೇ ಕೊಡಬೇಕಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಅಭಿಪ್ರಾಯದ ಮಾತು.

Sri M. PALANIYAPPAN.—What are the steps taken by Government to improve fisheries, Sir ?

Sri H. SIDDAVEERAPPA.—Sir, I have got a very big catalogue and I will place it on the table of the House.

ಶ್ರೀ ಎಕ್. ಹಚ್ಚಮಾಸ್ತಿಗೌಡ.—ಹಣಕಾಸಿನ ಸಚಿವರು ಈ ಬಾಬಿನಲ್ಲಿ ಉಳಿತಾಯವಾಗಬಹುದೆಂದು ಹೇಳಿದ್ದಾರೆಯೇ ?

Sri H. SIDDAVEERAPPA.—The amount of saving will be almost not very appreciable.

ಶ್ರೀ ವಿ. ಮುನಿಯಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಎಲ್ಲಾದರೂ ಮೀನು ಹಿಡಿಯುವ ಹಕ್ಕನ್ನು ಹರಾಜು ಮಾಡುವ ಪದ್ಧತಿಯಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆ ಇದೆ, ಮಾರಿಕಣಿವೆಯಲ್ಲಿರಬೇಕು.

ಶ್ರೀ ವಿ. ಮುನಿಯಪ್ಪ.—ರಾಣಿಕೆರೆ, ಭೀಮಸಮುದ್ರ ಕೆರೆ, ವಾಣಿವಿಲಾಸ ಸಾಗರ ಈ ಕಡೆ ಹೆಡ್ಡು ಅನುಕೂಲವಿದೆಯಲ್ಲವೇ ?

(No answer.)

Government servants Participating in functions of Political Parties.

Q.—271. **Sri S. GOPALA GOWDA.**—(Sagar—Hosanagar).—

Will the Government be pleased to state:—

(*a*) whether Government servants are allowed to participate in functions organised by political parties ;

(*b*) whether it is a fact that Government officials participated in the Congress Political Conference held in Shimoga on 31st January 1953, and in a function organised to honour the Congress President in Mandya ;

(*c*) if so, what action has been taken against such officers ?